All India Radio: Bangalore
National Bulletin In Kannada
23.05.2025 1.10 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಎರಡು ದಿನಗಳ ಈಶಾನ್ಯ ವಲಯ ಹೂಡಿಕೆದಾರರ ಶೃಂಗಸಭೆಗೆ ಪ್ರಧಾನಿ ನರೇಂದ್ರಮೋದಿ ದೆಹಲಿಯಲ್ಲಿಂದು ಚಾಲನೆ
- ಭಾರತ - ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆ : ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾತ್ರವಿಲ್ಲ - ವಿದೇಶಾಂಗ ಸಚಿವ ಜೈಶಂಕರ್ ಸ್ಪಷ್ಟನೆ
- ಏಳುಸಾವಿರಕ್ಕೂ ಹೆಚ್ಚು ಬಾಹ್ಯಾಕಾಶ ಮಿಷನ್ ಪರೀಕ್ಷೆ ಯಶಸ್ವಿ , ಇನ್ನೂ ಮೂರು ಸಾವಿರ ಪರೀಕ್ಷೆ ನಡೆಸಲು ಇಸ್ರೋ ಚಿಂತನೆ
- ಐಪಿಎಲ್ ಟಿ ೨೦ ಕ್ರಿಕೆಟ್ : ಲಕ್ನೋ ದಲ್ಲಿ ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು - ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿ

<><><><>

ಪ್ರಧಾನಿ ನರೇಂದ್ರಮೋದಿ ನವದೆಹಲಿಯಲ್ಲಿಂದು ಉದಯೋನ್ಮುಖ ಈಶಾನ್ಯ ಹೂಡಿಕೆದಾರರ ಶೃಂಗಸಭೆಯನ್ನು ಉದ್ಘಾಟಿಸಿದರು. ಈಶಾನ್ಯ ವಲಯದಲ್ಲಿ ಬಂಡವಾಳ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಜಾಗತಿಕ ಮತ್ತು ದೇಶಿಯ ಬಂಡವಾಳ ಆಕರ್ಷಣೆ ಮಾಡುವ ಉದ್ದೇಶದಿಂದ ಎರಡು ದಿನಗಳ ಶೃಂಗಸಭೆಯನ್ನು ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಮಾತಾನಾಡಿದ ಈಶಾನ್ಯ ವಲಯ ಅಭಿವೃದ್ಧಿ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಈಶಾನ್ಯ ವಲಯದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಸಂಪರ್ಕ ವ್ಯವಸ್ಥೆ ಅಭಿವೃದ್ಧಿ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಿದೆ ಎಂದು ಹೇಳಿದರು. ಈ ವಲಯದಲ್ಲಿ ಇಂದು ೧೭ ವಿಮಾನ ನಿಲ್ದಾಣಗಳಿದ್ದು ಎರಡು ಸಾವಿರಕ್ಕೂ ಹೆಚ್ಚು ವಿಮಾನ ಸಂಪರ್ಕಗಳಿವೆ ಈಶಾನ್ಯ ವಲಯದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ ಎಂದು ಹೇಳಿದರು. ಆಗ್ನೇಯ ಏಷ್ಯಾದ ಅಂತಾರಾಷ್ಟ್ರೀಯ ಕಾರಿಡಾರ್ ಆಗಿ ಈಶಾನ್ಯ ವಲಯ ಅಭಿವೃದ್ಧಿ ಆಗುವ ಸಾಧ್ಯತೆಗಳು ನಿಚ್ಚಳವಾಗಿವೆ .ಮೇಕ್ ಇನ್ ಇಂಡಿಯಾ, ಮೇಕ್ ಇನ್ ದಿ ನಾರ್ತ್ ಈಸ್ಟ್ ಮತ್ತು ಮೇಕ್ ಫಾರ್ ದಿ ವರ್ಲ್ಡ್ ಅಭಿಯಾನಗಳಲ್ಲಿ

ಬಂಡವಾಳ ಹೂಡಿಕೆ ಮಾಡುವಂತೆ ಸಿಂಧಿಯಾ ಅವರು ಬಂಡವಾಳ ಹೂಡಿಕೆದಾರರು ಮತ್ತ ಉದ್ಯಮಿಗಳಿಗೆ ಕರೆ ನೀಡಿದರು.

ಧ್ವನಿ: ಜ್ಯೋತಿರಾದಿತ್ಯ ಸಿಂಧಿಯಾ

ಎರಡು ದಿನಗಳ ಶೃಂಗಸಭೆಯಲ್ಲಿ ಸಚಿವಾಲಯ ಮಟ್ಟದ ಅಧಿವೇಶನಗಳು ವಾಣಿಜ್ಯ ಮತ್ತು ಸರ್ಕಾರದ ನಡುವಿನ ಸಂವಾದಗಳು, ನವೋದ್ಯಮಗಳು ಮತ್ತು ನೀತಿ ಕುರಿತ ಪ್ರದರ್ಶನಗಳು ಮತ್ತಿತ್ತರ ಕಾರ್ಯಕ್ರಮಗಳು ನಡೆಯಲಿವೆ.

<><><><>

ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಗೆ ತಾವು ಮಧ್ಯಸ್ಥಿಕೆ ವಹಿಸಿದ್ದಾಗಿ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವ ಹೇಳಿಕೆಯನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಳ್ಳಿ ಹಾಕಿದ್ದಾರೆ. ಯಾವುದೇ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆ ಇಲ್ಲದೆಯೇ ಉಭಯ ದೇಶಗಳ ನಡುವೆ ನಡೆದ ಮಾತುಕತೆಗಳ ಫಲವಾಗಿ ಇತೀಚಿನ ಕದನ ವಿರಾಮ ಘೋಷಣೆಯಾಗಿದೆ ಎಂದು ಅವರು ಸ್ಪಷ್ಟ ಪಡಿಸಿದ್ದಾರೆ. ನೆದರ್‌ಲ್ಯಾಂಡ್ಸ್ ನಲ್ಲಿ ಮಾಧ್ಯಮ ಸಂದರ್ಶನ ದಲ್ಲಿ ಮಾತಾ ನಾಡಿದ ಜೈಶಂಕರ್ ಉಭಯ ದೇಶಗಳ ನಡುವಿನ ಬಿಕ್ಕಟ್ಟನ್ನು ಭಾರತ ಮತ್ತು ಪಾಕಿಸ್ತಾನ ನೇರ ಮಾತುಕತೆ ಮೂಲಕವೇ ಬಗೆಹರಿಸಿಕೊಳ್ಳಬೇಕಿದೆ ಎಂದು ಹೇಳಿದ್ದಾರೆ. ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವ ಬಗ್ಗೆ ಪಾಕಿಸ್ತಾನ ಗಂಭೀರ ಸ್ವರೂಪದ ನಿಲುವು ಕೈಗೊಂಡರಷ್ಟೇ ಆದೇಶದೊಂದಿಗೆ ಮಾತುಕತೆ ನಡೆಸಲು ಭಾರತ ಮುಕ್ತವಾಗಿದೆ ಎಂದು ಪುನರುಚ್ಚರಿಸಿದ್ದಾರೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ತಿಳಿಗೊಳಿಸಲು ಮತ್ತು ಕದನ ವಿರಾಮ ಘೋಷಣೆಗೆ ತಾವು ಮಧ್ಯಸ್ಥಿಕೆ ವಹಿಸಿದ್ದಾಗಿ ಡೊನಾಲ್ಡ್ ಟ್ರಂಪ್ ಈ ಮೊದಲು ಹೇಳಿಕೆ ನೀಡಿದ್ದರ ಹಿನ್ನೆಲೆಯಲ್ಲಿ ಜೈಶಂಕರ್ ಅವರ ಹೇಳಿಕೆಗೆ ವಿಶೇಷ ಮಹತ್ವ ಬಂದಿದೆ.

<><><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ಇದುವರೆಗೂ ೭ ಸಾವಿರದ ೨೦೦ ಬಾಹ್ಯಾಕಾಶ ಮಿಷನ್ ಪರೀಕ್ಷೆಗಳನ್ನು ಪೂರ್ಣಗೊಳಿಸಿದೆ ಮತ್ತು ಇನ್ನೂ ೩ ಸಾವಿರಪರೀಕ್ಷೆಗಳು ಬಾಕಿ ಉಳಿದಿವೆ ಎಂದು ಸಂಸ್ಥೆಯ ಮುಖ್ಯಸ್ಥ ವಿ.ನಾರಾಯಣನ್ ಅವರು ಹೇಳಿದ್ದಾರೆ.

೨೦೨೫ನ್ನುಗಗನ ಯಾನ ವರ್ಷವೆಂದು ಘೋಷಿಸಿಸಲಾಗಿದೆ ಎಂದು ಹೇಳುವ ಮೂಲಕ ಅವರು ಪ್ರಸಕ್ತ ವರ್ಷದ  ಮಹತ್ವವನ್ನು ತಿಳಿಸಿದ್ದಾರೆ. ೨೦೨೫ರಲ್ಲಿ ಹಲವಾರು ಕಾರ್ಯಾಚರಣೆಗಳನ್ನು ಯೋಜಿಸಲಾಗಿದೆ.ಇದರಲ್ಲಿ ನಾಸಾ ಇಸ್ರೋ,ಸಿಂಥೇಟಿಕ್ ಅಪರ್ಚರ್ ರಾಡಾರ್ ಉಪಗ್ರಹವೂ ಸೇರಿದೆ, ಇದನ್ನು ಭಾರತದ ಸ್ವಂತ ಉಡಾವಣಾ ವಾಹನದಿಂದ ಉಡಾಯಿಸಲಾಗುವುದು ಎಂದು ಹೇಳಿದ್ದಾರೆ. ಡಿಸೆಂಬರ್ ೨೦೨೫ರ ವೇಳೆಗೆ, ವ್ಯೋಮ್‌ಮಿತ್ರ ಎಂದು ಕರೆಯಲ್ಪಡುವ ಮೊದಲ ಸಿಬ್ಬಂದಿ ಇಲ್ಲದ ಮಿಷನ್ ಮತ್ತು ನಂತರ ಎರಡು ಸಿಬ್ಬಂದಿ ಇಲ್ಲದ ಮಿಷನ್ ಗಳನ್ನು  ಇಸ್ರೋ ಉಡಾವಣೆ ಮಾಡಲಿದೆ ಎಂದು ಇಸ್ರೋ ಮುಖ್ಯಸ್ಥರು ತಿಳಿಸಿದ್ದಾರೆ.

<><><><>

ಡಿಎಂಕೆ ಸಂಸದರಾದ ಕನಿಮೋಳಿ ನೇತೃತ್ವದ ಮೂರನೇ ಸರ್ವಪಕ್ಷ ನಿಯೋಗ ರಷ್ಯಾದ ರಾಜಧಾನಿ ಮಾಸ್ಕೋಗೆ ಇಂದು ತಲುಪಿದೆ. ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ವಿರುದ್ಧ ಭಾರತ ನಡೆಸಿದ ಕಾರ್ಯಾಚರಣೆ ಕುರಿತಂತೆ ಜಾಗತಿಕ ನಾಯಕರಿಗೆ ಮನವರಿಕೆ ಮಾಡಿ ಕೊಡುವ ಉದ್ದೇಶದಿಂದ ವಿವಿಧ ದೇಶಗಳಿಗೆ ಭೇಟಿ ನೀಡಲು ರಚಿಸಲಾಗಿರುವ ಏಳು ಸರ್ವಪಕ್ಷಗಳ ನಿಯೋಗಗಳ ಪೈಕಿ ಇದು ಒಂದಾಗಿದೆ. ಸುದ್ದಿಗಾರರೊಂದಿಗೆ ಕನಿಮೊಳಿ ರಷ್ಯಾ, ಭಾರತದ ವ್ಯೂಹಾತ್ಮಕ ಪಾಲುದಾರ ರಾಷ್ಟ್ರವಾಗಿದೆ ಮತ್ತು ಉಭಯ ದೇಶಗಳು ರಾಜತಾಂತ್ರಿಕ ವಿಚಾರಗಳು ಮತ್ತು ವಾಣಿಜ್ಯೋದ್ಯಮದಲ್ಲಿ  ನಿರಂತರವಾಗಿ ಒಗ್ಗೂಡಿ ಕೆಲಸ ಮಾಡುತ್ತಿವೆ ಎಂದು ಹೇಳಿದ್ದಾರೆ.

ಧ್ವನಿ : ಕನಿಮೋಳಿ

ಈ ನಡುವೆ ಜೆಡಿಯು ಸಂಸದ ಸಂಜಯ್ ಝಾ ನೇತೃತ್ವದ ಮತ್ತೊಂದು ಸರ್ವಪಕ್ಷಗಳ ನಿಯೋಗ ಜಪಾನಿನ ಟೋಕಿಯೊದಲ್ಲಿ ಬ್ರೆಜಿಲ್, ಆಸ್ಟ್ರೇಲಿಯಾ, ಕೊಲೊಂಬಿಯಾ, ಗ್ರೀಸ್ ಮತ್ತು ದಕ್ಷಿಣ ಕೋರಿಯಾ ದೇಶಗಳ ರಾಯಭಾರಿಗಳೊಂದಿಗೆ ಸಂವಾದ ನಡೆಸಿದೆ.

<><><><>

ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಅವಕಾಶಗಳಿಗೆ ಟ್ರಂಪ್ ಆಡಳಿತ ನಿರ್ಬಂಧಿಸಿದೆ. ಈ ಕುರಿತು ಅಮೇರಿಕಾದ ಗೃಹ ಕಾರ್ಯದರ್ಶಿ ಕ್ರಿಸ್ಟಿ ನಿಯೋ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದಿದ್ದಾರೆ. ವಿಶ್ವವಿದ್ಯಾಲಯದಲ್ಲಿ ವಿದೇಶಿ ವಿದ್ಯಾರ್ಥಿಗಳಿಗೆ ಪ್ರವೇಶ ಪಡೆಯುವುದು ಹಕ್ಕು ಅಲ್ಲ,  ಇದೊಂದು ಅವಕಾಶವಷ್ಟೇ ಎಂದು ಅವರು

ಸ್ಪಷ್ಟ ಪಡಿಸಿದ್ದಾರೆ. ಈ ನಿರ್ಧಾರದಿಂದಾಗಿ ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಬೇರೆಡೆಗೆ ವರ್ಗಾವಣೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ.

<><><>

ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮಣಿಪುರದಲ್ಲಿ ವಿಶೇಷ ರಾಷ್ಟ್ರೀಯ ತನಿಖಾ ಸಂಸ್ಥೆ - ಎನ್.ಐ.ಎ. ನ್ಯಾಯಾಲಯವನ್ನು ಸ್ಥಾಪಿಸಿದೆ. ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರೊಂದಿಗೆ ಸಮಾಲೋಚನೆ ನಡೆಸಿದ ನಂತರ ಚುರಚಂದ್‌ಪುರ ದಲ್ಲಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವನ್ನು ಎನ್.ಐ.ಎ. ವಿಶೇಷ ನ್ಯಾಯಾಲಯವನ್ನಾಗಿ ಪರಿವರ್ತಿಸಲಾಗಿದೆ.

<><><>

ಕೊಂಕಣ್ ಹಾಗೂ ಗೋವಾದಲ್ಲಿ ನಾಳೆವರೆಗೂ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರ್ನಾಟಕ, ಮಧ್ಯಮಹಾರಾಷ್ಟ್ರ, ಅಂಡಾಮಾನ್-ನಿಕೋಬಾರ್ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಮುಂದಿನ ಎರಡು-ಮೂರು ದಿನಗಳವರೆಗೆ ಭಾರಿ ಮಳೆಯಾಗುವ ನಿರೀಕ್ಷೆ ಇದೆ ಎಂದು ಇಲಾಖೆ ತಿಳಿಸಿದೆ.

<><><>

ಮುಂಬೈ ಷೇರು ಪೇಟೆ ವಹಿವಾಟು ಇಂದು ಬೆಳಿಗ್ಗೆ ಆರಂಭವಾಗುತ್ತಿದ್ದಂತೆ ಸೆನ್ಸೆಕ್ಸ್ ಮತ್ತು ನಿಫ್ಟಿ ಆರಂಭಿಕ ಏರಿಕೆ ಕಂಡಿದೆ. ಜಾಗತಿಕ ಮಿಶ್ರ ಬೆಳವಣಿಗೆಗಳ ನಡುವೆಯೂ ಎಫ್ಎಂಸಿಜಿ, ಐಟಿ ಮತ್ತು ಆಟೋ ಮೊಬೈಲ್ ವಲಯಗಳಲ್ಲಿ ಆರಂಭಿಕ ವಹಿವಾಟು ಏರಿಕೆ ಕಂಡಿತು. ಆರಂಭಿಕ ವಹಿವಾಟಿನಲ್ಲಿ ಸೆನ್ಸೆಕ್ಸ್ ೫೪೧ ಪಾಯಿಂಟ್‌ಗಳ ಏರಿಕೆಯಾಗಿ ೮೧ ಸಾವಿರದ ೪೯೩ ಕ್ಕೆ ತಲುಪಿದರೆ, ನಿಫ್ಟಿ ೧೭೫ ಪಾಯಿಂಟ್‌ಗಳ ಏರಿಕೆಯಾಗಿ ೨೪ ಸಾವಿರದ ೭೮೫ ಕ್ಕೆ ತಲುಪಿದೆ.

<><><>

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇದೇ ತಿಂಗಳ ೨೫ ರಂದು ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ದೇಶ ಬಾಂಧವರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಆಕಾಶವಾಣಿಯ ಮನ್ ಕಿ ಬಾತ್ ನ ೧೨೨ ನೇ ಸಂಚಿಕೆಯಾಗಲಿದೆ. ಟೋಲ್-ಫ್ರೀ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಮನದ ಮಾತಿನ ಸಂಚಿಕೆಗೆ ಜನರು ತಮ್ಮ ಆಲೋಚನೆ, ಸಲಹೆಗಳನ್ನು ಸಲ್ಲಿಸಬಹುದು. ನರೇಂದ್ರ ಮೋದಿ ಅಪ್ಲಿಕೇಶನ್ ಅಥವಾ ಮೈ ಜಿಒವಿ ಓಪನ್ ಫೋರಂ ಮೂಲಕ ಆನ್‌ಲೈನ್‌ನಲ್ಲಿ ಜನರು ತಮ್ಮ

ಅನಿಸಿಕೆಗಳನ್ನು ಹಂಚಿಕೊಳ್ಳಬಹುದು. ಸಲಹೆಗಳನ್ನು ಸ್ವೀಕರಿಸಲು ಇಂದು ಕೊನೆಯ ದಿನವಾಗಿದೆ.

<><><><>

ಲಕ್ನೋದ ಭಾರತರತ್ನ ಶ್ರೀ ಅಟಲ್‌ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದುನಡೆಯಲಿರುವ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>